ಅಸಲು ದಾವಾ ನಂಃ 10/2021
ಪಿ ಡಬ್ಲ್ಯುಃ1



ದಿನಾಂಕಃ **07-12-2023** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು.
ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಂ ಹೆಚ್ ಎಸ್ ಕೆ ವಕೀಲರಿಂದಃ

ನಾನು ಕೃಷಿ ಮತ್ತು ಸಮಾಜ ಕಲ್ಯಾಣ ಇಲಾಖೆಯ ಹಾಸ್ಟೆಲ್ ನಲ್ಲಿ ಕೂಕ್ ಕೆಲಸ ಮಾಡಿಕೊಂಡಿದ್ದೇನೆ . 2021 ನೇ ಸಾಲಿನಿಂದಲೂ ನಾನು ಸಮಾಜ ಕಲ್ಯಾಣ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದೇನೆ ಎಂದರೆ ಸರಿ. ನಾನು ನ್ಯಾಯಾಲಯಕ್ಕೆ ಬರುವಾಗ ಸಮಾಜ ಕಲ್ಯಾಣ ಇಲಾಖೆಯಲ್ಲಿ ಎಲ್ಲಾ ದಿನಾಂಕಗಳಲ್ಲೂ ಅನುಮತಿಯನ್ನು ಪಡೆದು ಬರುತ್ತೇನೆ ಎಂದರೆ ಸಾಕ್ಷಿ ನಮ್ಮ ಕೆಲಸದ ವೇಳೆ ಬೆಳಗ್ಗೆ 6 ರಿಂದ 10 ಗಂಟೆ ಹಾಗೂ ಸಂಜೆ 4.30 ರಿಂದ 9.00 ಗಂಟೆ ಕಾರಣ ನಾನು ನನ್ನ ಹಾಸ್ಟೆಲ್ ನ ಮೇಲ್ವಿಚಾರಕರಿಗೆ ತಿಳಿಸಿ ಬರುತ್ತೇನೆ. ನಮ್ಮ ಇಲಾಖೆಯಿಂದ ಇದಕ್ಕೆ ಸಂಭಂದಪಟ್ಟ ದಾಖಲಾತಿಯನ್ನು ತರಿಸಲು ನನ್ನ ಯಾವುದೇ ಅಭ್ಯಂತರ ಇಲ್ಲ.

ದಿಃ 11-10-2023 ರ ಪೋಲೀಸ್ ಉಪನಿರೀಕ್ಷಕ ಉಪಾಧ್ಯಕ್ಷರ ಪತ್ರವನ್ನು ಓದಲು ತೋರಿಸಲಾಗಿ ಸಾಕ್ಷಿ ನನಗೆ ಕನ್ನಡಕ ಇಲ್ಲದೇ ಓದಲು ಆಗುವುದಿಲ್ಲ ಎಂದು ನುಡಿದಿರುತ್ತಾರೆ. ಸಾಕ್ಷಿಗೆ ದಿನಾಂಕ 14-09-2023 ರ ಪೋಲೀಸ್ ಉಪಾಧ್ಯಕ್ಷ ಉಪ ವಿಭಾಗ ರವರ ಪತ್ರವನ್ನು ತೋರಿಸಲಾಗಿ ಸಾಕ್ಷಿ ನನಗೆ ಕನ್ನಡಕ ಇಲ್ಲದೇ ಓದಲು ಆಗುವುದಿಲ್ಲ ಎಂದು ನುಡಿದಿರುತ್ತಾರೆ. ಸಾಕ್ಷಿಗೆ ನಿಪಿ-1 ಮತ್ತು ನಿಪಿ -2 ದಾಖಲಾತಿಯನ್ನು ತೋರಿಸಲಾಗಿ ಸಾಕ್ಷಿ ನನಗೆ ಕನ್ನಡಕ ಇಲ್ಲದೇ ಓದಲು ಆಗುವುದಿಲ್ಲ ಎಂದು ನುಡಿದಿರುತ್ತಾರೆ. ಕನ್ನಡಕ ನಾಳೆ ತೆಗೆದುಕೊಂಡು ಬರಲು ಆಗುತ್ತದೆ ಎಂದರೆ ಸಾಕ್ಷಿ ಕನ್ನಡಕ ಹಾಳಾಗಿದೆ ಟೆಸ್ಟ್ ಮಾಡಿಸಿಕೊಂಡು ತರಬೇಕು ಎಂದು ನುಡಿದಿರುತ್ತಾರೆ. ಒಂದು ತಿಂಗಳು 15 ದಿನಗಳ ಸಮಯ ಬೇಕು ಎಂದು ಸಾಕ್ಷಿ ನುಡಿದಿರುತ್ತಾರೆ.

ಮುಂದುವರಿದ ಪಾಟೀ ಸವಾಲು - ಈ ಹಂತದಲ್ಲಿ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)
ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ,
ಸಂಚಾರಿ ನ್ಯಾಯಾಲಯ, ಕೊಪ್ಪ.

ಸಾಕ್ಷಿದಾರರ ಸಹಿಃ